بسم اللہ الرحمٰن الرحیم

# قرارداد

## بموقع تعلقہ کانفرنس ۔۔۔۔عورت معمار انسانیت

جماعت اسلامی ہند ۔۔۔تعلقہ کا یہ اجتماع محسوس کرتا ہے کہ خدا کی بنائی ہوئی اسکیم میں مرد و خواتین ایک دوسرے کے رفیق ہیں نہ کہ فریق۔ خواتین جسمانی ساخت مزاج اور نفسیات میں مختلف ہوتے ہوئے بھی ایمان وعمل میں، عزت و وقار میں، حقوق و فرائض میں،آخرت کی مسئولیت اور اجرمیں مرد کے برابر ہیں۔خواتین نہ صرف نصف انسانیت ہیں بلکہ بجاطور پر'نصف بہتر' کہی جاتی ہیں۔مگر آج خواتین کی ابتر صورتحال اور اس کے صحیح پوزیشن کو سمجھنے میں سماج جن غلطیوں کا شکار ہے یہ اجتماع عام اس پر اپنی حیرت کا اظہار کرتا ہے۔ مزید بر آں عورت پر ظلم و تشدد، جبری عصمت دری، شادی میں حسن و دولت کو معیار بنانے کے رواج، بعد ازاں تکالیف دینا، میراث میں حق تلفی، اس طرح دوسرے درجہ کے شہری کا درجہ دیے جانے کے چلن کی سخت مذمت کرتا ہے۔

**خواتین کا یہ اجتماع ۔۔**

☆ امت مسلمہ سے مطالبہ کرتا ہے کہ خواتین کا جو مقام قرآن و سنت متعین کرتے ہیں اس کے مطابق ان کے ساتھ برتاؤ کیا جائے۔ مزید براں عام سماج کو خواتین کے سلسلے میں اسلامی تعلیمات سے روشناس کرانے میں داعیانہ کردار ادا کریں۔

**خواتین کا یہ اجتماع۔۔**

☆ اہل ملک سے مطالبہ کرتا ہے کہ عورت کے رول بحیثیت معمار انسانیت کا ادراک کرے اور اسے تحسین کی نگاہ سے دیکھے ۔ رشتہ زوجیت میں رہنا ، ذمہ داریوں کو نباہنا، بچوں کی پیدائش ، ان کی پرورش و نگہداشت، امورخانہ داری کے انجام دینے کو سماج اور انسانیت کی تعمیر میں اس کے رول کو مرد کے رول سے کمتر نہ سمجھا جائے۔

**خواتین کا یہ اجتماع۔۔**

☆ حکومت ہند سے مطالبہ کرتا ہے کہ موجودہ فلمیں، گانے، اشتہارات جو عورت کو محض ایک تفریح کے آلہ کار کے طور پر پیش کرتے ہیں ان پر پابندی لگائی جائے اور ان امور کے لئے ضابطہ بندی کی جائے۔ نیز کالجس، سڑکوں، بسوں اور ٹرینوں میں ان کے تحفظ کے لئے مناسب بندوبست کئے جائیں۔

**خواتین کا یہ اجتماع ۔۔**

ملک میں فرقہ واریت کے بڑھتے ہوئے رجحانات کو بڑی تشویش کی نگاہ سے دیکھتا ہے۔اور اسے ملک کی سالمیت و یکجہتی اور ہمہ جہت ترقی کی راہ میں زبردست رکاوٹ سمجھتا ہے۔ اور حکومت ہند سے مطالبہ کرتا ہے کہ وہ فرقہ پرست عناصر سے سختی سے نمٹے جو ملک کی سیکولر فضا کو بگاڑنے کی مسلسل کوششیں کررہے ہیں۔اور یہ اجتماع عوام سے بھی یہ امید کرتا ہے کہ وہ ایسے سماج دشمن عناصر کو ہر سطح پر شکست دینے کی کوشش کریں گے۔

**خواتین کا یہ اجتماع ۔۔**

سرمایہ دارانہ استعمار کے بڑھتے ہوئے اثرات پر بھی تشویش کا اظہار کرتا ہے۔ ان کے ظلم وستم کے پنجے عوام پر دن بہ دن کستے جارہے ہیں۔ مہنگائی کا بڑھنا،چھوٹے کاروبار کا متاثر ہونا، فیشن پرستی کا عام ہونا،اسی کے کڑوے و کسیلے پھل ہیں۔یہ اجتماع حکومت ہند سے مطالبہ کرتا ہے کہ ایسی قانون سازی نہ کرے جس سے ان استعماری قوتوں کی مزید حوصلہ افزائی ہوئی ہو اور ملک میں ان کے در اندازی کے امکانات بڑھ جاتے ہوں۔

**شعبۂ خواتین، جماعت اسلامی ہند ۔۔۔۔**

| | | |
|---|---|---|
| 1 | 2 | 3 |
| 4 | 5 | 6 |

# ‘ಮಹಿಳೆ ಮಾನವತೆಯ ಶಿಲ್ಪಿ’ ಎಂಬ .......... ತಾಲೂಕು ಸಮ್ಮೇಳನದಲ್ಲಿ ಅಂಗೀಕರಿಸಲಾದ ಠರಾವುಗಳು

ಜಮಾಅತೆ ಇಸ್ಲಾಮಿ ಹಿಂದ್‌ನ ಈ.................... ತಾಲೂಕು ಸಮ್ಮೇಳನವು,

ದೇವನ ಸೃಷ್ಟಿ ಯೋಜನೆಯಲ್ಲಿ ಸ್ತ್ರೀ–ಪುರುಷರು ಪರಸ್ಪರರಿಗೆ ಆಪ್ತರೇ ಹೊರತು ಪ್ರತಿಸ್ಪರ್ಧಿಗಳಲ್ಲವೆಂದು ಭಾವಿಸುತ್ತದೆ. ಮಹಿಳೆಯರ ದೇಹ ರಚನೆ, ಗುಣಸ್ವಭಾವಗಳು ಮತ್ತು ಮಾನಸಿಕತೆಯು ಭಿನ್ನವಾಗಿದ್ದರೂ ವಿಶ್ವಾಸ–ಆಚಾರ, ಘನತೆ–ಗೌರವ, ಹಕ್ಕು–ಅಧಿಕಾರಗಳು, ಪರಲೋಕದ ವಿಚಾರಣೆ ಮತ್ತು ಪ್ರತಿಫಲದಲ್ಲಿ ಅವರು ಪುರುಷರಿಗೆ ಸಮಾನರಾಗಿದ್ದಾರೆ. ಮಹಿಳೆಯರು ಮಾನವ ಕುಲದ ಅರ್ಧಾಂಶ ಮಾತ್ರವಲ್ಲ ಅತ್ಯುತ್ತಮ ಅರ್ಧಾಂಶವಾಗಿದ್ದಾರೆ. ಮಹಿಳೆಯರ ಮೇಲೆ ಹಿಂಸೆ–ದೌರ್ಜನ್ಯ, ಬಲಾತ್ಕಾರ–ಮಾನಭಂಗ, ಮದುವೆಯ ವೇಳೆ ಹಣ ಮತ್ತು ಸೌಂದರ್ಯವನ್ನು ಮಾನದಂಡವಾಗಿ ನೋಡುವ ಸಂಪ್ರದಾಯ. ಮದುವೆಯ ನಂತರ ಪೀಡನೆ, ವಾರೀಸು ಹಕ್ಕಿನಿಂದ ವಂಚಿತಗೊಳಿಸುವುದು ಹಾಗೂ ಅವರನ್ನು ಎರಡನೆ ದರ್ಜೆಯ ನಾಗರಿಕರನ್ನಾಗಿ ಮಾಡುವ ನೀತಿಯನ್ನು ಖಂಡಿಸುತ್ತದೆ.

**ಮಹಿಳೆಯರ ಈ ಸಮ್ಮೇಳನವು......**

ಕುರ್‌ಆನ್ ಮತ್ತು ಪ್ರವಾದಿ(ಸ)ಚರ್ಯೆಯು ನಿರ್ಣಯಿಸಿದ ಮಹಿಳೆಯರ ಸ್ಥಾನಮಾನದಂತೆ ಅವರೊಡನೆ ವರ್ತಿಸಬೇಕೆಂದು ಮುಸ್ಲಿಮ್ ಸಮುದಾಯವನ್ನು ವಿನಂತಿಸುತ್ತದೆ. ಜೊತೆಗೆ ಸಮಾಜದಲ್ಲಿ ಮಹಿಳೆಯರಿಗೆ ಸಂಬಂಧಿಸಿ ಇಸ್ಲಾಮಿ ಶಿಕ್ಷಣ ಬೋಧನೆಗಳನ್ನು ಪರಿಚಯ ಪಡಿಸುವುದರಲ್ಲಿ ಮಿಶನರಿ (ಧರ್ಮಪ್ರಚಾರಕ) ಪಾತ್ರ ವಹಿಸಬೇಕೆಂದೂ ವಿನಂತಿಸುತ್ತದೆ.

**ಮಹಿಳೆಯರ ಈ ಸಮ್ಮೇಳನವು.........**

ದೇಶಬಾಂಧವರು, ‘ಮಾನವತೆಯ ಶಿಲ್ಪಿ’ಗಳೆಂಬ ಮಹಿಳೆಯರ ಪಾತ್ರವನ್ನು ಗುರುತಿಸಿ ಅವರನ್ನು ಗೌರವಾದರ ದೃಷ್ಟಿಯಿಂದ ನೋಡಬೇಕೆಂದು ವಿನಂತಿಸುತ್ತದೆ. ವಿವಾಹ ಬಂಧನ, ಕರ್ತವ್ಯ ನಿರ್ವಹಣೆ, ಮಕ್ಕಳ ಜನನ, ಪಾಲನೆ, ಪೋಷಣೆ ಹಾಗೂ ಮನೆ ವಾರ್ತೆಯ ಕೆಲಸ ಕಾರ್ಯಗಳ ಈಡೇರಿಕೆ, ಸಮಾಜ ಮತ್ತು ಮಾನವತೆಯ ನಿರ್ಮಾಣ ಇತ್ಯಾದಿ ವಿಷಯಗಳಲ್ಲಿ ಅವರ ಪಾತ್ರ ಪುರುಷರ ಪಾತ್ರಕ್ಕಿಂತ ಕಡಿಮೆಯೆಂದು ಭಾವಿಸಬಾರದೆಂದೂ ವಿನಂತಿಸುತ್ತದೆ.

**ಮಹಿಳೆಯರ ಈ ಸಮ್ಮೇಳನವು..............**

ಮಹಿಳೆಯರನ್ನು ಭೋಗದ ವಸ್ತುಗಳೆಂದು ಬಿಂಬಿಸುವಂತಹ ಆಧುನಿಕ ಸಿನಿಮಾ, ಹಾಡುಗಳು ಮತ್ತು ಜಾಹೀರಾತುಗಳನ್ನು ನಿಷೇಧಿಸಬೇಕು ಮತ್ತು ಅದಕ್ಕೆ ಸಂಬಂಧಿಸಿ ಪ್ರತಿಬಂಧಕ ಕಾಯಿದೆಯನ್ನು ರಚಿಸಬೇಕೆಂದು ಭಾರತ ಸರಕಾರವನ್ನು ಒತ್ತಾಯಿಸುತ್ತದೆ. ಜೊತೆಗೆ ಶಾಲಾ–ಕಾಲೇಜುಗಳು, ಬಸ್ಸು ಮತ್ತು ರೈಲುಗಾಡಿಗಳಲ್ಲಿ ಮಹಿಳೆಯರ ರಕ್ಷಣೆಗಾಗಿ ಸೂಕ್ತ ವ್ಯವಸ್ಥೆ ಮಾಡಬೇಕೆಂದೂ ವಿನಂತಿಸುತ್ತದೆ.

**ಮಹಿಳೆಯರ ಈ ಸಮ್ಮೇಳನವು.......**

ದೇಶದಲ್ಲಿ ಹೆಚ್ಚುತ್ತಿರುವ ಕೋಮುವಾದಿ ಮನೋಭಾವವನ್ನು ತೀವ್ರ ಕಳವಳದ ದೃಷ್ಟಿಯಿಂದ ವೀಕ್ಷಿಸುತ್ತದೆ ಮತ್ತು ಅದನ್ನು ದೇಶದ ಅಖಂಡತೆ, ಏಕತೆ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಮಾರಕವೆಂದು ಭಾವಿಸುತ್ತದೆ. ಭಾರತ ಸರಕಾರವು ದೇಶದ ಜಾತ್ಯತೀತ ವಾತಾವರಣವನ್ನು ನಿರಂತರ ಕೆಡಿಸಲು ಪ್ರಯತ್ನಿಸುತ್ತಿರುವ ಕೋಮುವಾದಿ ಶಕ್ತಿಗಳೊಂದಿಗೆ ಕಠೋರವಾಗಿ ವ್ಯವಹರಿಸಬೇಕೆಂದು ವಿನಂತಿಸುತ್ತದೆ ಹಾಗೂ ಇಂತಹ ಸಮಾಜ ವಿರೋಧಿ ಶಕ್ತಿಗಳನ್ನು ದೇಶದ ಜನತೆಯು ಸರ್ವ ರಂಗಗಳಲ್ಲೂ ಸೋಲಿಸುವುದೆಂದು ಈ ಸಮ್ಮೇಳನವು ನಿರೀಕ್ಷೆಯನ್ನಿರಿಸುತ್ತದೆ.

**ಮಹಿಳೆಯರ ಈ ಸಮ್ಮೇಳನವು.......**

ಬಂಡವಾಳಶಾಹಿ ಸಾಮ್ರಾಜ್ಯತ್ವದ ಹೆಚ್ಚುತ್ತಿರುವ ಪ್ರಭಾವಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸುತ್ತದೆ. ಅವರ ಅಕ್ರಮ–ಅನ್ಯಾಯಗಳ ಕಪಿಮುಷ್ಠಿಯಲ್ಲಿ ಜನಸಾಮಾನ್ಯರು ನಿರಂತರ ಬಿಗಿಯಲ್ಪಡುತ್ತಿದ್ದಾರೆ. ಹೆಚ್ಚುತ್ತಿರುವ ಬೆಲೆಯೇರಿಕೆ, ಸಣ್ಣ ವ್ಯಾಪಾರಗಳಿಗೆ ಅಡ್ಡಿ, ಫ್ಯಾಶನ್ ಪ್ರಿಯತೆಯ ವ್ಯಾಪಕ ಹೆಚ್ಚಳ ಇತ್ಯಾದಿಗಳು ಅದರದೇ ಕಹಿ ಫಲಗಳಾಗಿವೆ. ಈ ಸಮ್ಮೇಳನವು, ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಇನ್ನಷ್ಟು ಪ್ರೋತ್ಸಾಹಿಸುವಂತಹ ಮತ್ತು ದೇಶದೊಳಗೆ ಅವರು ನುಸುಳುವುದಕ್ಕೆ ಇನ್ನೂ ಹೆಚ್ಚು ಅವಕಾಶ ಕೊಡುವಂತಹ ಕಾನೂನನ್ನು ರಚಿಸಬಾರದೆಂದು ಭಾರತ ಸರಕಾರವನ್ನು ವಿನಂತಿಸುತ್ತದೆ.

## ಮಹಿಳಾ ವಿಭಾಗ, ಜಮಾಅತೆ ಇಸ್ಲಾಮಿ ಹಿಂದ್...........

**ಸಹಿ**